6. ವಿಷಯ: ರಾಯಭಾಗ ತಾಲ್ಲೂಕಿನ ಬೋರ್‌ವೆಲ್‌ಗಳಿಗೆ ನೀರಿನ ಸಂಪರ್ಕ ಕಲ್ಪಿಸುವ ಕುರಿತು

ಶ್ರೀ ಪಿ. ರಾಜೀವ್ (ಕುಡಚಿ):– ಮಾನ್ಯ ಅಧ್ಯಕ್ಷರೆ, ರಾಯಭಾಗ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದೆ. Task-force ನಿಂದ 38 ಬೋರ್‌ವೆಲ್‌ಗಳನ್ನು ಮಾರ್ಚ್ ತಿಂಗಳಿನಲ್ಲಿ ಕೊರೆಸಿದರೆ ಇವತ್ತಿನವರೆಗೆ motor ಕೂರಿಸಿಲ್ಲ, electrification ಮಾಡಿಲ್ಲ. ತುರ್ತಾಗಿ ನೀರನ್ನು ಕೊಡಬೇಕಾದ ಸಂದರ್ಭ ಬಂದಿದೆ. ಇವತ್ತಿನವರೆಗೆ ನೀರಿನ ಸಂಪರ್ಕವಾಗಿಲ್ಲ. ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಕ್ಷಣ ಸೂಕ್ತ ನಿರ್ದೇಶನ ಕೊಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):– ಮಾನ್ಯ ಅಧ್ಯಕ್ಷರೆ, ಬಹಳ ಗಂಭೀರವಾದ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದಾರೆ. ಸಾಧ್ಯವಾದರೆ ನಾನು ಇಂದು ಸಂಜೆ ಅಥವಾ ನಾಳೆ ಅವರಿಗೆ ವಿವರವನ್ನು ಒದಗಿಸುತ್ತೇನೆ.

ಅಧ್ಯಕ್ಷರು:– ಆಯಿತು. ಈಗ ಕೃಷ್ಣಾರೆಡ್ಡಿ ಯವರು.

7. ವಿಷಯ: ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ 2009–10 ರಲ್ಲಿ ಮಾಡಿರುವ ಕಾಮಗಾರಿಗಳಿಗೆ ಹಣ ಬಿಡುಗಡೆ ಮಾಡುವ ಕುರಿತು.

ಶ್ರೀ ಜೆ.ಕೆ. ಕೃಷ್ಣಾರೆಡ್ಡಿ (ಚಿಂತಾಮಣಿ):– ಮಾನ್ಯ ಅಧ್ಯಕ್ಷರೆ, ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ 2009–10 ರಲ್ಲಿ ಮಾಡಿರುವ ಕೆಲಸಕ್ಕೆ ಇವತ್ತಿನವರೆಗೆ ಹಣ ಬಿಡುಗಡೆಯಾಗಿಲ್ಲ. ಕಳೆದ ಅಧಿವೇಶನದಲ್ಲಿಯೂ ಸಹ ನಾವು ಪ್ರಸ್ತಾಪ ಮಾಡಿದ್ದೇವೆ. ಮಾನ್ಯ ಮಂತ್ರಿಗಳು ತಕ್ಷಣ ಸೂಚನೆ ನೀಡುವುದಾಗಿ ಹೇಳಿದ್ದು ಇವತ್ತಿನವರೆಗೂ ಯಾವುದೇ ರೀತಿಯ ಕ್ರಮ ತೆಗೆದುಕೊಂಡಿಲ್ಲ. ನಾವು ರಾಜಕಾರಣದಲ್ಲಿ ಅನೇಕ ಕಡೆ ಉದ್ಯೋಗ ಖಾತ್ರಿ ಬಹಳ ಒಳ್ಳೆಯ ಯೋಜನೆ, ಇದನ್ನು ಬಳಸಿಕೊಳ್ಳಬೇಕೆಂದು ಹೇಳುತ್ತಲೇ ಇರುತ್ತೇವೆ. ಆದರೆ, 5–6 ವರ್ಷಗಳಾದರೂ ಕೂಡ ಹಣ ಬಿಡುಗಡೆಯಾಗಿಲ್ಲ. ತಕ್ಷಣ ಹಣ ಬಿಡುಗಡೆಯಾಗಬೇಕೆಂದು ಪ್ರಸ್ತಾಪಿಸುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುತ್ತಿರುವ ವಿಷಯದಲ್ಲಿ ಸತ್ಯವಿದೆ. ಏಪ್ರಿಲ್ ತಿಂಗಳಿನಿಂದ ನಮಗೆ NREG ಹಣ ಬಿಡುಗಡೆಯಲ್ಲಿ ಸ್ವಲ್ಪ ವಿಳಂಬವಾಗುತ್ತಿದೆ. ಕೇಂದ್ರ ಸರ್ಕಾರದ ಮೇಲೆ ಹಣ ಬಿಡುಗಡೆಗಾಗಿ ಒತ್ತಾಯಿಸುತ್ತಿದ್ದೇವೆ. ಸನ್ಮಾನ್ಯ ಪ್ರಧಾನ ಮಂತ್ರಿಗಳಿಗೆ ವಿಶೇಷ ಪತ್ರ ಕಳುಹಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿದ್ದೇನೆ. ಈ ಒತ್ತಡವನ್ನು ಹೆಚ್ಚು ಮಾಡಿ ಬೇಗ ಹಣ ಪಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಏತನ್ಮಧ್ಯೆ ಏನು ತಾತ್ಪೂರ್ತಿಕವಾಗಿ ಮಾಡಲು ಸಾಧ್ಯವೋ ಅದನ್ನು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಕೆ. ವೆಂಕಟೇಶ್: ಮಾನ್ಯ ಅಧ್ಯಕ್ಷರೆ, 2009–10ರ ಕಾಮಗಾರಿಗಳಿಗೆ payment ಆಗದಿರುವ ಸಮಸ್ಯೆ ಎಲ್ಲಾ ತಾಲ್ಲೂಕುಗಳಲ್ಲಿಯೂ ಇದೆ. ಯಾವುದು ಕೆಲಸ ಆಗಿದೆ. ಅದಕ್ಕೂ payment ಆಗಿಲ್ಲ. ಯಾರಾದರೂ ಕಳಪೆ ಕಾಮಗಾರಿ ಮಾಡಿದ್ದರೆ ಬೇಕಾದರೆ payment ನಿಲ್ಲಿಸಲಿ.

ಅಧ್ಯಕ್ಷರು:– ಈಗ ಬೇಡಿಕೆಗಳ ಮೇಲಿನ ಚರ್ಚೆ ಇದೆಯಲ್ಲ, ಅದರಲ್ಲಿ ಕೇಳಿ. ಈಗ ದತ್ತಾರವರು ಕೇಳಿ.

8. ವಿಷಯ: ಬೆಳೆ ವಿಮೆ ಪ್ರೀಮಿಯಮ್ ಕಟ್ಟಲು ನಿಗದಿ ಮಾಡಲಾಗಿದ್ದ ಕಾಲಾವಧಿ ವಿಸ್ತರಿಸಿರುವ ಕುರಿತು ಜನರಿಗೆ ಪ್ರಚಾರ ನೀಡುವ ಬಗ್ಗೆ.

ಶ್ರೀ ವೈ.ಎಸ್.ವಿ. ದತ್ತಾ (ಕಡೂರು):– ಮಾನ್ಯ ಅಧ್ಯಕ್ಷರೆ, ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದಿಷ್ಟೇ, ರೈತರು ಬೆಳೆ ವಿಮೆಗೆ ಪ್ರೀಮಿಯಮ್ ಕಟ್ಟುವುದಕ್ಕೆ ಇಂದು ಅಂದರೆ ಜೂನ್, 30ನೇ ತಾರೀಖು ಕೊನೆಯ ದಿನ ಎಂದು ಗೊತ್ತಾಗಿದೆ. ಆದರೆ, ಅದಕ್ಕೆ ಒದಗಿಸಬೇಕಾದ ದಸ್ತಾವೇಜುಗಳು. . .. ಇಲ್ಲ ಅದನ್ನು extend ಮಾಡಿರುವ ವಿಚಾರ ಜನರಿಗೆ ಗೊತ್ತಾಗಿಲ್ಲ. ನೀವು extend ಮಾಡಿರುವುದಾಗಿ ಹೇಳಿದಿರಿ. ಸ್ವಲ್ಪ ಅದಕ್ಕೆ ಪ್ರಚಾರ ಕೊಡಿ. ಜನರಿಗೆ ಇನ್ನೂ ಸ್ಪಷ್ಟವಾಗಿಲ್ಲ.